**All India Radio: Bangalore**
**National Bulletin In Kannada**
**14.08.2026 1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**14.08.2026 1.10 p.m.**

**<><><><>**

ಮುಖ್ಯಾಂಶಗಳು

1. ೮೦ನೇ ಸ್ವಾತಂತ್ರ್ಯೋತ್ಸವಕ್ಕೆ ದೇಶ ಸಜ್ಜು; ಇಂದು ಸಂಜೆ ರಾಷ್ಟ್ರವನ್ನುದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಷಣ
2. ಒಂದು ಸಾವಿರದ ೫೭ ಸಿಬ್ಬಂದಿಗೆ ಶೌರ್ಯ ಮತ್ತು ಸೇವಾ ಪದಕ ಘೋಷಿಸಿದ ಕೇಂದ್ರ ಸರ್ಕಾರ; ೯೨ ಸಿಬ್ಬಂದಿಗೆ ರಾಷ್ಟ್ರಪತಿಗಳ ವಿಶಿಷ್ಟ ಸೇವಾ ಪದಕ
3. ವಿಭಜನೆಯ ಭೀಕರತೆಗಳ ಸಂಸ್ಮರಣಾ ದಿನ; ಸಂತ್ರಸ್ತರ ಧೈರ್ಯ-ತ್ಯಾಗ ಸ್ಮರಿಸಿದ ಪ್ರಧಾನಿ ನರೇಂದ್ರ ಮೋದಿ
4. ಕೆನಡಿಯನ್ ಓಪನ್ ಟೆನಿಸ್; ಪೋಲೆಂಡ್‌ನ ಇಗಾ ಸ್ವಿಯೆಟೆಕ್‌ಗೆ ಮಹಿಳಾ ಸಿಂಗಲ್ಸ್ ಪ್ರಶಸ್ತಿ

<><><><>

೮೦ನೇ ಸ್ವಾತಂತ್ರ್ಯ ದಿನೋತ್ಸವದ ಮುನ್ನಾದಿನವಾದ ಇಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಷ್ಟ್ರವನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ. ರಾಷ್ಟ್ರಪತಿಯವರ ವಿಶೇಷ ಭಾಷಣ ಇಂದು ಸಂಜೆ ೭ ಗಂಟೆಗೆ ಆಕಾಶವಾಣಿಯ ಎಲ್ಲಾ ತರಂಗಾಂತರಗಳಲ್ಲಿ ಪ್ರಸಾರವಾಗಲಿದೆ. ಇದರ ಜೊತೆಗೆ ದೂರದರ್ಶನದ ಎಲ್ಲಾ ವಾಹಿನಿಗಳಲ್ಲಿ ಮೊದಲು ಹಿಂದಿಯಲ್ಲಿ ತದನಂತರ ಇಂಗ್ಲಿಷ್‌ನಲ್ಲಿ ಪ್ರಸಾರವಾಗಲಿದೆ. ದೂರದರ್ಶನದಲ್ಲಿ ಹಿಂದಿ ಮತ್ತು ಇಂಗ್ಲಿಷ್ ಭಾಷಣಗಳ ಪ್ರಸಾರದ ನಂತರ, ದೂರದರ್ಶನದ ಪ್ರಾದೇಶಿಕ ವಾಹಿನಿಗಳಲ್ಲಿ ಆಯಾ ಪ್ರಾದೇಶಿಕ ಭಾಷೆಗಳಲ್ಲಿ ಭಾಷಣ ಪ್ರಸಾರವಾಗಲಿದೆ. ಆಕಾಶವಾಣಿ ರಾತ್ರಿ ೯:೩೦ ಕ್ಕೆ ತನ್ನ ಪ್ರಾದೇಶಿಕ ಜಾಲಗಳಲ್ಲಿ ರಾಷ್ಟ್ರಪತಿಯವರ ಭಾಷಣದ ಪ್ರಾದೇಶಿಕ ಭಾಷಾ ಅವತರಣಿಕೆಗಳನ್ನು ಪ್ರಸಾರ ಮಾಡಲಿದೆ.

<><><><>

ದೇಶ ನಾಳೆ ೮೦ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಿದೆ. ನವದೆಹಲಿಯ ಐತಿಹಾಸಿಕ ಕೆಂಪುಕೋಟೆಯಲ್ಲಿ ನಡೆಯಲಿರುವ ಸಮಾರಂಭದ ಪ್ರಧಾನಿ ನರೇಂದ್ರ ಮೋದಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಲಿದ್ದಾರೆ. ಭಾರತೀಯ ವಾಯುಪಡೆಯ ಎರಡು ಎಂಐ-೧೭

ಹೆಲಿಕಾಪ್ಟರ್‌ಗಳು ಪುಷ್ಪವೃಷ್ಟಿ ನೆರವೇರಿಸಲಿದ್ದು, ರಾಷ್ಟ್ರಧ್ವಜಾರೋಹಣದೊಂದಿಗೆ ೨೧ ಕುಶಲತೋಪುಗಳ ಗೌರವ ವಂದನೆ ನಡೆಯಲಿದೆ. ಬಳಿಕ ಪ್ರಧಾನಿ ದೇಶವನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ. ರಾಷ್ಟ್ರೀಯ ಗೀತೆ ವಂದೇ ಮಾತರಂನ ೧೫೦ ವರ್ಷಗಳ ಪರಂಪರೆಯನ್ನು ಸ್ಮರಿಸುವುದು ಹಾಗೂ ೨೦೪೭ರ ವಿಕಸಿತ ಭಾರತದ ಪಯಣದಲ್ಲಿ ಯುವಶಕ್ತಿಯ ಕೊಡುಗೆಯನ್ನು ಬಿಂಬಿಸುವುದು ಈ ಬಾರಿಯ ಆಚರಣೆಯ ವಿಶೇಷತೆಯಾಗಿದೆ. ಇದೇ ಮೊದಲ ಬಾರಿಗೆ ಕೆಂಪುಕೋಟೆಯ ಸ್ವಾತಂತ್ರ್ಯ ದಿನಾಚರಣೆಯಲ್ಲಿ ವಂದೇ ಮಾತರಂ ಗಾಯನ ನಡೆಯಲಿದೆ. ರಾಷ್ಟ್ರೀಯ ಕೆಡೆಟ್ ಕೋರ್-ಎನ್‌ಸಿಸಿ ಹಾಗೂ ಮೈ ಭಾರತ್ ಸ್ವಯಂಸೇವಕರು ವಂದೇ ಮಾತರಂ ಗೀತೆ ಹಾಡಲಿದ್ದಾರೆ. ಸೇನೆ, ನೌಕಾಪಡೆ ಮತ್ತು ವಾಯುಪಡೆಯ ೨ ಸಾವಿರದ ೫೦೦ ಬಾಲಕ ಮತ್ತು ಬಾಲಕಿಯರ ಕೆಡೆಟ್‌ಗಳು ಹಾಗೂ ಮೈ ಭಾರತ್ ಸ್ವಯಂಸೇವಕರು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ವಿಶ್ವಕರ್ಮ ಯೋಜನೆಯ ಕುಶಲಕರ್ಮಿಗಳು, ಮುದ್ರಾ ಯೋಜನೆಯ ಮಹಿಳಾ ಉದ್ಯಮಿಗಳು, ಪಿಎಂ ಸ್ವನಿಧಿ ಯೋಜನೆಯ ಬೀದಿಬದಿ ವ್ಯಾಪಾರಿಗಳು ಹಾಗೂ ಭಾರತ್ ಟ್ಯಾಕ್ಸಿಯ ಚಾಲಕರು ಸೇರಿದಂತೆ ವಿವಿಧ ಕ್ಷೇತ್ರಗಳ ಸುಮಾರು ೫ ಸಾವಿರ ವಿಶೇಷ ಅತಿಥಿಗಳನ್ನು ಸಮಾರಂಭ ವೀಕ್ಷಿಸಲು ಆಹ್ವಾನಿಸಲಾಗಿದೆ. ಆಹ್ವಾನಿತರಿಗೆ ಸ್ಮರಣಿಕೆ ನೀಡಿ ಗೌರವಿಸಲಾಗುವುದು. ರಾಜಧಾನಿಯಲ್ಲಿ ದೆಹಲಿ ಪೊಲೀಸರು ಬಿಗಿ ಭದ್ರತಾ ವ್ಯವಸ್ಥೆ ಕೈಗೊಂಡಿದ್ದು, ವಿವಿಧ ಸಂಸ್ಥೆಗಳ ಸುಮಾರು ೧೫ ಸಾವಿರ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಕೆಂಪುಕೋಟೆಯಲ್ಲಿ ೧ ಸಾವಿರ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ದೇಶಾದ್ಯಂತ ದೇಶಭಕ್ತಿ ಮೂಡಿಸುವ ಉದ್ದೇಶದಿಂದ ೩೪೩ ಪ್ರಮುಖ ಸ್ಥಳಗಳಲ್ಲಿ ಬ್ಯಾಂಡ್ ಪ್ರದರ್ಶನ ಆಯೋಜಿಸಲಾಗಿದೆ.

<><><><>

ಸ್ವಾತಂತ್ರ್ಯ ದಿನಾಚರಣೆಯಂದು ಬೆಳಗ್ಗೆ ೪ ಗಂಟೆಗೆ ದೆಹಲಿ ಮೆಟ್ರೋ ತನ್ನ ಜಾಲದಾದ್ಯಂತದ ಎಲ್ಲಾ ಟರ್ಮಿನಲ್ ನಿಲ್ದಾಣಗಳಿಂದ ಸೇವೆಗಳನ್ನು ಪ್ರಾರಂಭಿಸಲಿದೆ. ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸುವ ವಿಶೇಷ ಅತಿಥಿಗಳು, ಆಹ್ವಾನಿತರು ಮತ್ತು ಸಾರ್ವಜನಿಕರ ಸಂಚಾರಕ್ಕೆ ಅನುಕೂಲವಾಗುವಂತೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ದೆಹಲಿ ಮೆಟ್ರೋ ರೈಲು ನಿಗಮ-ಡಿಎಂಆರ್‌ಸಿ ತಿಳಿಸಿದೆ. ದಿನದ ನಿಗದಿತ ವೇಳಾಪಟ್ಟಿಯ ಪ್ರಕಾರ, ನಿಯಮಿತ ಆದಾಯ ಸೇವೆಗಳು ಪ್ರಾರಂಭವಾಗುವವರೆಗೆ ಎಲ್ಲಾ ಮಾರ್ಗಗಳಲ್ಲಿ ಮೆಟ್ರೋ ಸೇವೆಗಳು ೩೦ ನಿಮಿಷಗಳ

ಆವರ್ತನದಲ್ಲಿ ಕಾರ್ಯನಿರ್ವಹಿಸುತ್ತವೆ ಎಂದು ಡಿಎಂಆರ್‌ಸಿ ತಿಳಿಸಿದೆ. ಲಾಲ್ ಕಿಲಾ, ಜಾಮಾ ಮಸೀದಿ ಮತ್ತು ದೆಹಲಿ ಗೇಟ್ ಮೆಟ್ರೋ ನಿಲ್ದಾಣಗಳು ಸ್ವಾತಂತ್ರ್ಯ ದಿನಾಚರಣೆಯ ಸ್ಥಳಕ್ಕೆ ಹತ್ತಿರದ ನಿಲ್ದಾಣಗಳಾಗಿವೆ.

<><><><>

ಸ್ವಾತಂತ್ರ್ಯೋತ್ಸವದ ಸುಸಂದರ್ಭದಲ್ಲಿ ಪೊಲೀಸ್, ಅಗ್ನಿಶಾಮಕ, ಗೃಹರಕ್ಷಕ, ನಾಗರಿಕ ರಕ್ಷಣೆ ಹಾಗೂ ಕಾರಾಗೃಹ ಇಲಾಖೆಗಳ ಒಟ್ಟು ೧ ಸಾವಿರದ ೫೭ ಸಿಬ್ಬಂದಿಗೆ ಶೌರ್ಯ ಮತ್ತು ಸೇವಾ ಪದಕಗಳನ್ನು ಕೇಂದ್ರ ಸರ್ಕಾರ ಇಂದು ಘೋಷಿಸಿದೆ. ಒಟ್ಟು ೩೦೧ ಶೌರ್ಯ ಪದಕಗಳನ್ನು ಘೋಷಿಸಲಾಗಿದೆ. ಕೇಂದ್ರ ಗೃಹ ಸಚಿವಾಲಯವು ಇಂದು ಬಿಡುಗಡೆ ಮಾಡಿರುವ ಪಟ್ಟಿಯ ಪ್ರಕಾರ, ಇವುಗಳಲ್ಲಿ ೨೭೨ ಪೊಲೀಸ್ ಸಿಬ್ಬಂದಿಗೆ ಹಾಗೂ ೨೯ ಅಗ್ನಿಶಾಮಕ ಸಿಬ್ಬಂದಿಗೆ ಲಭಿಸಿದೆ. ಪ್ರಾಣ ಮತ್ತು ಆಸ್ತಿ ರಕ್ಷಣೆ, ಅಪರಾಧ ತಡೆ ಹಾಗೂ ಅಪರಾಧಿಗಳನ್ನು ಬಂಧಿಸುವಲ್ಲಿ ಪ್ರದರ್ಶಿಸಿದ ಅಸಾಮಾನ್ಯ ಸಾಹಸಕ್ಕಾಗಿ ಈ ಪದಕಗಳನ್ನು ನೀಡಲಾಗುತ್ತದೆ. ಶೌರ್ಯ ಪದಕ ಪುರಸ್ಕೃತರ ಪೈಕಿ ೧೯೭ ಸಿಬ್ಬಂದಿ ಎಡಪಂಥೀಯ ಉಗ್ರವಾದದಿಂದ ಪೀಡಿತ ಪ್ರದೇಶಗಳಲ್ಲಿದ್ದರೆ, ೫೧ ಸಿಬ್ಬಂದಿ ಜಮ್ಮು ಮತ್ತು ಕಾಶ್ಮೀರ, ೧೨ ಸಿಬ್ಬಂದಿ ಈಶಾನ್ಯ ರಾಜ್ಯಗಳು ಹಾಗೂ ೪೧ ಸಿಬ್ಬಂದಿ ಇತರ ಪ್ರದೇಶಗಳಲ್ಲಿ ಜರುಗಿದ ಸಾಹಸ ಕಾರ್ಯಗಳಿಗಾಗಿ ಪದಕಕ್ಕೆ ಭಾಜನರಾಗಿದ್ದಾರೆ. ಇದರ ಜೊತೆಗೆ ಅತ್ಯುತ್ತಮ ಸೇವೆಗಾಗಿ ನೀಡಲಾಗುವ 'ರಾಷ್ಟ್ರಪತಿಗಳ ವಿಶಿಷ್ಟ ಸೇವಾ ಪದಕ' ಒಟ್ಟು ೯೨ ಸಿಬ್ಬಂದಿಗೆ ದೊರೆತಿದೆ ಇದರಲ್ಲಿ ೮೩ ಪೊಲೀಸ್, ೪ ಅಗ್ನಿಶಾಮಕ, ೩ ಗೃಹರಕ್ಷಕ, ೨ ಕಾರಾಗೃಹ ಇಲಾಖೆಗಳ ಸಿಬ್ಬಂದಿ ಸೇರಿದ್ದಾರೆ. ಹಾಗೆಯೇ, ಪ್ರಶಂಸನೀಯ ಸೇವಾ ಪದಕಗಳನ್ನು ಒಟ್ಟು ೬೬೪ ಸಿಬ್ಬಂದಿಗೆ ನೀಡಲಾಗಿದ್ದು, ಇದರಲ್ಲಿ ೬೦೬ ಪೊಲೀಸ್, ೨೮ ಅಗ್ನಿಶಾಮಕ, ೧೮ ಗೃಹರಕ್ಷಕ ಮತ್ತು ೧೨ ಕಾರಾಗೃಹ ಸಿಬ್ಬಂದಿ ಸೇರಿದ್ದಾರೆ. ಕೇಂದ್ರೀಯ ತನಿಖಾ ದಳ - ಸಿಬಿಐನ ಇಪ್ಪತ್ತೊಂದು ಅಧಿಕಾರಿಗಳಿಗೆ ರಾಷ್ಟ್ರಪತಿಗಳ ವಿಶಿಷ್ಟ ಸೇವಾ ಪದಕ ಮತ್ತು ಪ್ರತಿಭಾನ್ವಿತ ಸೇವಾ ಪದಕ ನೀಡಿ ಗೌರವಿಸಲಾಗಿದೆ. ಇವರಲ್ಲಿ ಆರು ಅಧಿಕಾರಿಗಳಿಗೆ ರಾಷ್ಟ್ರಪತಿಗಳ ವಿಶಿಷ್ಟ ಸೇವಾ ಪದಕ ನೀಡಲಾಗಿದೆ.

<><><><>

೮೦ನೇ ಸ್ವಾತಂತ್ರ್ಯ ದಿನಾಚರಣೆಯ ಮುನ್ನಾದಿನವಾದ ಇಂದು ಸೈನಿಕರನ್ನುದ್ದೇಶಿಸಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಇಂದು ಸಂಜೆ ೫ ಗಂಟೆ ೧೦ ನಿಮಿಷಕ್ಕೆ ಮಾತನಾಡಲಿದ್ದಾರೆ. ಅವರ ಭಾಷಣ

ಆಕಾಶವಾಣಿಯ ಎಫ್‌ಎಂ ಗೋಲ್ಡ್ ೧೦೦.೧ ಮೆಗಾಹರ್ಟ್ಸ್ ಹಾಗೂ ಇಂದ್ರಪ್ರಸ್ಥ ವಾಹಿನಿ ೩೬೬.೩ ಮೀಟರ್ ಅಥವಾ ೮೧೯ ಕಿಲೋಹರ್ಟ್ಜ್‌ನಲ್ಲಿ ಪ್ರಸಾರವಾಗಲಿದೆ.

<><><>

ಇಂದು 'ವಿಭಜನೆಯ ಭೀಕರತೆಗಳ ಸಂಸ್ಮರಣಾ ದಿನ'. ಇದರ ಹಿನ್ನೆಲೆಯಲ್ಲಿ, ೧೯೪೭ ರ ದೇಶ ವಿಭಜನೆಯ ಸಂದರ್ಭದಲ್ಲಿ ಪ್ರಾಣ ಕಳೆದುಕೊಂಡ ಹಾಗೂ ಅಪಾರ ಯಾತನೆ ಅನುಭವಿಸಿದ ಲಕ್ಷಾಂತರ ಜನರಿಗೆ ರಾಷ್ಟ್ರ ಗೌರವ ನಮನ ಸಲ್ಲಿಸುತ್ತಿದೆ. ಈ ಅಂಗವಾಗಿ ರಾಜಧಾನಿ ನವದೆಹಲಿ ಸೇರಿದಂತೆ ದೇಶದಾದ್ಯಂತ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ವಿಭಜನೆಯ ಭೀಕರತೆಗಳ ಸಂಸ್ಮರಣಾ ದಿನ'ದಂದು ಪ್ರಧಾನಮಂತ್ರಿ ನರೇಂದ್ರ ಮೋದಿ, ದೇಶ-ವಿಭಜನೆಯಿಂದ ಬಾಧಿತರಾದ ಪ್ರತಿಯೊಬ್ಬರ ಧೈರ್ಯ ಹಾಗೂ ತ್ಯಾಗವನ್ನು ಕೃತಜ್ಞತೆಯಿಂದ ಸ್ಮರಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಪ್ರಧಾನಿ, ವಿಭಜನೆಯ ಸಮಯದ ಭೀಕರ ಅನ್ಯಾಯ ಮತ್ತು ಸಂಕಷ್ಟಗಳನ್ನು ಮೆಟ್ಟಿ ನಿಂತು, ಶೂನ್ಯದಿಂದ ಬದುಕನ್ನು ಕಟ್ಟಿಕೊಂಡ ಜನರು, ತಮ್ಮ ಕಷ್ಟಗಳನ್ನೇ ಸಾಧನೆಗಳಾಗಿ ಪರಿವರ್ತಿಸಿ ದೇಶದ ಪ್ರಗತಿಗೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಶ್ಲಾಘಿಸಿದ್ದಾರೆ. ಕೇಂದ್ರ ಸಚಿವರಾದ ಅಮಿತ್ ಶಾ ಮತ್ತು ರಾಜನಾಥ್ ಸಿಂಗ್ ಕೂಡ ವಿಭಜನೆಯ ವೇಳೆ ಪ್ರಾಣ ಕಳೆದುಕೊಂಡ ಹಾಗೂ ಅಪಾರ ಯಾತನೆ ಎದುರಿಸಿದವರಿಗೆ ಗೌರವನಮನ ಸಲ್ಲಿಸಿದ್ದಾರೆ. ಈ ದಿನದ ಆಚರಣೆಯ ಮೂಲಕ ಕೇಂದ್ರ ಸರ್ಕಾರ ಯುವಪೀಳಿಗೆಯಲ್ಲಿ ವಿಭಜನೆಯ ಭೀಕರ ಪರಿಣಾಮಗಳ ಕುರಿತು ಅರಿವು ಮೂಡಿಸುತ್ತಿದೆ ಎಂದು ಸಚಿವರು ತಿಳಿಸಿದ್ದಾರೆ.

<><><>

ಪ್ರಸ್ತುತ ಆಗಸ್ಟ್ ತಿಂಗಳಿನಲ್ಲಿ ಎರಡನೇ ಮೇಲ್ಮನವಿ ಹಾಗೂ ದೂರುಗಳ ವಿಲೇವಾರಿಗೆ ಸಂಬಂಧಿಸಿದಂತೆ ಮಾಧ್ಯಮಗಳಲ್ಲಿ ಪ್ರಕಟವಾದ ವರದಿಗಳ ಕುರಿತು ಕೇಂದ್ರ ಮಾಹಿತಿ ಆಯೋಗವು ಸ್ಪಷ್ಟನೆ ನೀಡಿದ್ದು, ಈ ತಿಂಗಳ ೧೨ ರವರೆಗೆ ಒಟ್ಟು ೭೬೮ ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ತಿಳಿಸಿದೆ. ಮಾಧ್ಯಮಗಳಲ್ಲಿ ಪ್ರಸಾರವಾಗಿರುವ ಅಂಕಿ-ಅಂಶಗಳು ಆಯೋಗದ ನೈಜ ವಿಲೇವಾರಿಯನ್ನು ಪ್ರತಿನಿಧಿಸುವುದಿಲ್ಲ ಹಾಗೂ ವಿಲೇವಾರಿಯಾದ ಪ್ರಕರಣಗಳ ತೀರ್ಪುಗಳನ್ನು ಸಂಬಂಧಪಟ್ಟ ವ್ಯಕ್ತಿಗಳಿಗೆ ಅಂಚೆ ಮೂಲಕ ರವಾನಿಸಲಾಗುತ್ತಿದೆ ಎಂದು ಆಯೋಗ ತಿಳಿಸಿದೆ. ಆಗಸ್ಟ್ ೨ ನೇ ತಾರೀಖಿನಿಂದ ತಂತ್ರಾಂಶದ ನವೀಕರಣ ಪ್ರಕ್ರಿಯೆ

ನಡೆಯುತ್ತಿರುವುದರಿಂದ, ಜಾಲತಾಣದಲ್ಲಿನ ದತ್ತಾಂಶ ಆಗಸ್ಟ್ ೧ ರವರೆಗೆ ಮಾತ್ರ ಅಪ್‌ಡೇಟ್ ಆಗಿದೆ ಎಂದು ಆಯೋಗ ಸ್ಪಷ್ಟಪಡಿಸಿದೆ.

<><><><>

ಟೊರೊಂಟೊದಲ್ಲಿ ಕಳೆದ ರಾತ್ರಿ ನಡೆದ ಕೆನಡಿಯನ್ ಓಪನ್ ಟೆನಿಸ್‌ನ ಮಹಿಳಾ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ ಏಳನೇ ಶ್ರೇಯಾಂಕದ ಪೋಲೆಂಡ್‌ನ ಇಗಾ ಸ್ವಿಯೆಟೆಕ್ ಎರಡನೇ ಶ್ರೇಯಾಂಕದ ಎಲೆನಾ ರೈಬಾಕಿನಾ ಅವರನ್ನು ನೇರ ಸೆಟ್‌ಗಳಲ್ಲಿ ಮಣಿಸಿ, ಪ್ರಶಸ್ತಿ ಗೆದ್ದುಕೊಂಡಿದ್ದಾರೆ. ಸ್ವಿಯೆಟೆಕ್ ೬-೨ ೬-೩ ಅಂತರದ ಗೆಲುವಿನೊಂದಿಗೆ ಟೆನ್ನಿಸ್ ಋತುವಿನ ಮೊದಲ ಪ್ರಶಸ್ತಿ ಗೆದ್ದರು. ಮಹಿಳಾ ಡಬಲ್ಸ್‌ನಲ್ಲಿ ಜೆಕ್ ಗಣರಾಜ್ಯದ ಕೆಟರಿನಾ ಸಿನಿಯಾಕೊವಾ ಮತ್ತು ಚೀನಾದ ಝೂಂಗ್ ಶೂವಾಯಿ ಜೋಡಿ ಆಸ್ಟ್ರೇಲಿಯಾದ ಸ್ಟ್ರಾರ್ಮ್ ಹಂಟರ್ ಮತ್ತು ಅಮೆರಿಕದ ಡೆಸಿರೆ ಕ್ರಾಕ್‌ಜೈಕ್ ಜೋಡಿ ವಿರುದ್ಧ ೬-೪, ೬-೩ ಅಂತರದಲ್ಲಿ ಗೆದ್ದು, ಮಹಿಳಾ ಡಬಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡರು. ಮಾಂಟ್ರಿಯಲ್‌ನಲ್ಲಿ ನಡೆದ ಕೆನಡಿಯನ್ ಓಪನ್ ಟೆನ್ನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ಪ್ರಶಸ್ತಿಯನ್ನು ಅಮೆರಿಕಾದ ಬೆನ್ ಶೆಲ್ಟನ್ ಮುಡಿಗೇರಿಸಿಕೊಂಡಿದ್ದಾರೆ. ಇಂದು ಬೆಳಗ್ಗೆ ನಡೆದ ಫೈನಲ್ ಪಂದ್ಯದಲ್ಲಿ ಅವರು ಅಮೆರಿಕದವರೇ ಆದ ಬ್ರ್ಯಾಂಡನ್ ನಕಾಶಿಮಾ ವಿರುದ್ಧ ೬-೩, ೭-೬ ನೇರ ಸೆಟ್‌ಗಳ ಅಂತರದಲ್ಲಿ ಗೆಲುವು ದಾಖಲಿಸಿದರು. ಪುರುಷರ ಡಬಲ್ಸ್ ಪ್ರಶಸ್ತಿಯನ್ನು ಬ್ರೆಸಿಲ್‌ನ ರಫೇಲ್ ಮಾತೋಸ್ ಮತ್ತು ಓರ್ಲಾಡೋ ಲುಜ್ ಜೋಡಿ ಜಯಿಸಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>